**KUVEMPU UNIVERSITY**
**SAHYADRI SCIENCE COLLEGE, SHIVAMOGGA SAHYADRI SCIENCE COLLEGE ALUMNI ASSOCIATION (R)**

-----------------------------------------------------------------------------------------------------------

**DONATION GIVEN BY ALUMANI ASSOCIATION TO LIBRARY SAHYADRI SCIENCE COLLEGE.**

Venue: **LIBRARY** Date**: 22-07-2024** Time: **11.30AM**

Librarian and college staff of Sahyadri Science College requested to donate for the up - gradation and digitalization of library to alumni association,
The Directors and members of the Sahyadri Science College Alumni Association (R). accepted the requisition and decided in board meeting, after permission taken from the board members donated the Barcode scanners, stickers and white transparent solutions of 17 packs worth of rupees 53,575=00 (Fifty three thousand five hundred seventy five rupees) to library Sahyadri science college on 22-07-2024 to library.



ದಿ: 12-07-2024

ಇಂದ,
ಗ್ರಂಥಪಾಲಕರು
ಗ್ರಂಥಾಲಯ ವಿಭಾಗ
ಸಹ್ಯಾದ್ರಿ ವಿಜ್ಞಾನ ಕಾಲೇಜು
ಶಿವಮೊಗ್ಗ-577203.

ಗೆ,
ಅಧ್ಯಕ್ಷರು
ಹಿರಿಯ ವಿದ್ಯಾರ್ಥಿಗಳ ಸಂಘ
ಸಹ್ಯಾದ್ರಿ ವಿಜ್ಞಾನ ಕಾಲೇಜು
ಶಿವಮೊಗ್ಗ-577203.

ಮಾನ್ಯರೆ,

ವಿಷಯ: ಗ್ರಂಥಾಲಯದ ಗಣಕೀಕರಣಕ್ಕೆ ಸಂಬಂಧಿಸಿದ ಉಪಕರಣಗಳನ್ನು ಖರೀದಿ ಮಾಡಿ ಕೊಡುಗೆ ನೀಡುವ ಬಗ್ಗೆ.

*****

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, ಗ್ರಂಥಾಲಯದಲ್ಲಿ ಈಗಾಗಲೇ KOHA Library Management Software ನ್ನು ಅಳವಡಿಸಲಾಗಿದ್ದು, ಗ್ರಂಥಾಲಯದ ಪುಸ್ತಕಗಳಿಗೆ Barcoding ಮಾಡಬೇಕಾಗಿರುತ್ತದೆ. ಹಾಗೂ ನ್ಯಾಕ್ ಭೇಟಿ ನಿಮಿತ್ತ ಮತ್ತು ವಿದ್ಯಾರ್ಥಿಗಳಿಗೆ ತ್ವರಿತವಾಗಿ ಸೇವೆಯನ್ನು ನೀಡಲು ಈ ಕೆಳಕಂಡ ಪರಿಕರಗಳು ತುಂಬಾ ಅವಶ್ಯವಿರುವುದರಿಂದ ಇವುಗಳನ್ನು ಹಿರಿಯ ವಿದ್ಯಾರ್ಥಿಗಳ ಸಂಘದ ವತಿಯಿಂದ ಕೊಡುಗೆಯಾಗಿ ನೀಡಿ ಮುಂದಿನ ಗಣಕೀಕರಣದ ಕಾರ್ಯಕ್ಕೆ ಅನುಕೂಲ ಮಾಡಿಕೊಡಬೇಕಾಗಿ ತಮ್ಮಲ್ಲಿ ಕೋರುತ್ತೇವೆ.

| ಕ್ರ.ಸಂ | ವಿವರಗಳು | ಪ್ರಮಾಣ | ಅಂದಾಜು ವೆಚ್ಚ |
|---|---|---|---|
| 1. | Barcoding Labels | 55 ಪ್ಯಾಕೆಟ್ಸ್<br>( 1 ಪ್ಯಾಕೆಟ್ ನಲ್ಲಿ 100 ಶೀಟ್‌ಗಳು ಇರುತ್ತವೆ) | ರೂ. 24,750=00<br>(01 Packet Rs. 450/-) |
| 2. | Barcoding reader (Scanner) | 01-Gate Entry<br>(Without Cable)<br>02-Books Issue/Return<br>(With Cable)<br>02-Stock Verification | ರೂ. 30,000=00 |
| 3. | White Transparent solution Tape and dispenser | Tape Dispenser- 02<br>White transparent solution tape – 200 | ರೂ. 6,000=00 |
| (Total Rs. Sixty thousand Seven hundred fifty only) | | | ರೂ. 60,750=00 |

ವಂದನೆಗಳೊಂದಿಗೆ,

Sahyadri Science College
Shimoga
No. 690
Date 25

ತಮ್ಮ ವಿಶ್ವಾಸಿ

ಮುಖ್ಯಸ್ಥರು
ಗ್ರಂಥಾಲಯ ವಿಭಾಗ
ಸಹ್ಯಾದ್ರಿ ವಿಜ್ಞಾನ ಕಾಲೇಜು (ಸ್ವಾಯತ್ತ)
ಕುವೆಂಪು ವಿಶ್ವವಿದ್ಯಾನಿಲಯ
ಶಿವಮೊಗ್ಗ-577203.

ಇಂದ,
ಗ್ರಂಥಪಾಲಕರು
ಗ್ರಂಥಾಲಯ ವಿಭಾಗ
ಸಹ್ಯಾದ್ರಿ ವಿಜ್ಞಾನ ಕಾಲೇಜು
ಶಿವಮೊಗ್ಗ–577203.

ದಿ: 23–07–2024

ಗೆ,
ಅಧ್ಯಕ್ಷರು
ಹಿರಿಯ ವಿದ್ಯಾರ್ಥಿಗಳ ಸಂಘ
ಸಹ್ಯಾದ್ರಿ ವಿಜ್ಞಾನ ಕಾಲೇಜು
ಶಿವಮೊಗ್ಗ–577203.

ಮಾನ್ಯರೆ,

ವಿಷಯ: ಗ್ರಂಥಾಲಯದ ಗಣಕೀಕರಣಕ್ಕೆ ಸಂಬಂಧಿಸಿದ ಉಪಕರಣಗಳನ್ನು ಖರೀದಿಸಿ ದೇಣಿಗೆ ನೀಡಿರುವ ಬಗ್ಗೆ.

*****

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, ಗ್ರಂಥಾಲಯದ ಗಣಕೀಕರಣದ ವಿಷಯವಾಗಿ ಬಾರ್‌ಕೋಡಿಂಗ್ ಮಾಡುವ ಸಂಬಂಧ ಉಪಕರಣಗಳನ್ನು ಕೊಡುಗೆಯಾಗಿ ನೀಡುವಂತೆ ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷರಿಗೆ ಮನವಿಯನ್ನು ನೀಡಲಾಗಿತ್ತು. ಅದರಂತೆ ದಿನಾಂಕ:22–07–2024 ರಂದು ಗಣಕೀಕರಣಕ್ಕೆ ಅವಶ್ಯವಿರುವ ಉಪಕರಣಗಳನ್ನು ಹಿರಿಯ ವಿದ್ಯಾರ್ಥಿಗಳ ಸಂಘದ ವತಿಯಿಂದ ದೇಣಿಗೆ ನೀಡಿ ಗ್ರಂಥಾಲಯಕ್ಕೆ ಒದಗಿಸಿ ಕೊಟ್ಟಿರುತ್ತೀರಿ ಅದಕ್ಕಾಗಿ ತಮಗೆ ಹೃತ್ಪೂರ್ವಕವಾದ ಧನ್ಯವಾದಗಳನ್ನು ಸಲ್ಲಿಸುತ್ತಿದ್ದೇವೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

Rg. a.w
25.7.24

ಮುಖ್ಯಸ್ಥರು
ಗ್ರಂಥಾಲಯ ವಿಭಾಗ
ಸಹ್ಯಾದ್ರಿ ವಿಜ್ಞಾನ ಕಾಲೇಜು (ಸ್ವಾಯತ್ತ)
ಕುವೆಂಪು ವಿಶ್ವವಿದ್ಯಾನಿಲಯ
ಶಿವಮೊಗ್ಗ-577203.

Principal Sahyadri Science College Shimoga
No. 619
Date 26/7/24

ವಿದ್ಯಾರ್ಥಿ ಸಂಘದಿಂದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಕಾರ್ಯಾಗಾರ

# ಉತ್ತಮ ಅಧಿಕಾರಿಗಳಾಗಿ ಸಮಾಜ ಸೇವೆ ಮಾಡಿ

• ಶಿವಮೊಗ್ಗ



ಸಹ್ಯಾದ್ರಿ ವಿಜ್ಞಾನ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಕಾರ್ಯಾಗಾರವನ್ನು ಹಿರಿಯ ವಿದ್ಯಾರ್ಥಿಗಳ ಸಂಘದ ವತಿಯಿಂದ ಹಮ್ಮಿಕೊಳ್ಳಲಾಗಿತ್ತು.

ಕಾಲೇಜಿನ ಪ್ರಾಚಾರ್ಯರಾದ ಡಾ. ಎನ್.ರಾಜೇಶ್ವರಿ ಅವರು ಗಿಡಕ್ಕೆ ನೀರು ಹಾಕುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದ್ದರು.

ಸಮಾರೋಪ ಸಮಾರಂಭದಲ್ಲಿ ಹಿರಿಯ ವಿದ್ಯಾರ್ಥಿಗಳ ಸಂಘದ ನಿರ್ದೇಶಕರುಗಳಾದ ಪಿ..ಜೇಸುದಾಸ್, ನಾಗರಾಜ್ ನೇರಿಗೆ ಮಾತನಾಡಿ, ನಾವು ಇದೇ ಕಾಲೇಜಿನಲ್ಲಿ ಓದುತ್ತಿದ್ದಾಗ ಇಂತಹ ಸೌಲಭ್ಯಗಳು ನಮಗೆ ಸಿಗಲಿಲ್ಲ, ನಿಮಗೆ ಒಳ್ಳೆಯ ಮಾರ್ಗದರ್ಶನ ಓದಲು ಒಳ್ಳೆಯ ಅವಕಾಶ,ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಹೇಗೆ ಎದುರಿಸಬೇಕು ಎಂಬ ತರಬೇತಿ ಸಿಗುತ್ತಿರುವುದು ನಿಜಕ್ಕೂ ನಿಮ್ಮೆಲ್ಲರ ಸೌಭಾಗ್ಯ. ಇಂತಹ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ಒಳ್ಳೆಯ ಅಧಿಕಾರಿಗಳಾಗಿ ಸಮಾಜ ಸೇವೆ ಮಾಡಿರೆಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಪ್ರಸ್ತಾಪಿಕವಾಗಿ ಮಾತನಾಡಿದ ಹಿರಿಯ ವಿದ್ಯಾರ್ಥಿಗಳ ಸಂಘದ ಕಾರ್ಯದರ್ಶಿಗಳಾದ ಡಾ.ನಾಗರಾಜ, ಪರಿಸರ ಸಾಧನೆ ಎಂಬುದು ಸಾಧಕನ ಸ್ವತ್ತೇ ಹೊರತು ಸೋಮಾರಿಯ ಸ್ವತ್ತಲ್ಲ, ಅವಕಾಶವನ್ನು ಸದ್ಬಳಕೆ ಮಾಡಿಕೊಂಡು ಸಾಧಿಸಿ ತೋರಿಸಲು ಒಳ್ಳೆಯ ಅವಕಾಶವಿದು, ವಿದ್ಯಾರ್ಥಿಗಳು ಸಮಯ ಪರಿಪಾಲನೆಯ ಮಹತ್ವ ಅರಿತರೆ ಖಂಡಿತವಾಗಿಯೂ ಜೀವನದಲ್ಲಿ ಯಶಸ್ವಿಯಾಗುತ್ತಾರೆ ಎಂದು ತಿಳಿಸಿದರು. ಸ್ಪರ್ಧಾ ಕರ್ನಾಟಕ ಸಂಸ್ಥೆಯ ಮುಖ್ಯಸ್ಥರಾದ ಮೋಹನ್ ಕುಮಾರ್, ನಂಜಾನಾಯಕ್, ಮಲ್ಲಿಕಾರ್ಜುನ್, ಶ್ರೀನಾಗರಾಜ್ ಶಿರೋಳ ಸಂಪನ್ಮೂಲ ವ್ಯಕ್ತಿಗಳಾಗಿ ನಾಲ್ಕು ದಿನದ ಈ ಕಾರ್ಯಾಗಾರವನ್ನು ಯಶಸ್ವಿಗೊಳಿಸಿಕೊಟ್ಟರು. ವೇದಿಕೆಯಲ್ಲಿ ವಿದ್ಯಾರ್ಥಿ ಕ್ಷೇಮಾಧಿಕಾರಿ ಡಾ. ನಾಗರಾಜ. ಎನ್, ಡಾ. ವೆಂಕಟೇಶ್. ಪಿ.ಜಯಂತ್ ಬಾಬು ಇನ್ನಿತರರಿದ್ದರು

